ಅದು ಇರುವೆಡೆಗೆ ಹೋಗಬೇಕಾಗಿತ್ತು. ಈಗ ಅದರ ಬಿಂಬಪ್ರತಿ ತೆಗೆದುಕೊಂಡರೆ ನಾವು ಇರುವ ಕಡೆಯಲ್ಲಿಯೇ ಹಸ್ತಪ್ರತಿ ಓದಬಹುದು. ಡಿಜಿಟಲೀಕರಣವು ಹಸ್ತಪ್ರತಿ ಸಂರಕ್ಷಣೆಗೆ ಪೂರಕವಾಗಿದೆ.

**◆ ಈ ಕ್ಷೇತ್ರದ ಲೆಜೆಂಡ್‌ಗಳ ಬಗ್ಗೆ ಹೇಳಿ. ಅವರ ಯಾವ ಕೆಲಸಗಳು ಯಾವ ಕಾರಣಕ್ಕೆ ನಿಮಗೆ ಮುಖ್ಯ ಅನ್ನಿಸುತ್ತದೆ.**

ಕಳೆದ ಶತಮಾನದಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಜೊತೆಯಾಗಿ 'ಕರ್ಣಾಟಕ ಕಾವ್ಯಮಂಜರಿ' ಹಾಗೂ 'ಕರ್ಣಾಟಕ ಕಾವ್ಯಕಲಾನಿಧಿ' ಮಾಲಿಕೆಗಳ ಮೂಲಕ ಎಪ್ಪತ್ತೈದು ಕೃತಿಗಳನ್ನು ಸಂಪಾದಿಸಿದ್ದು, ನನಗೆ ಮುಖ್ಯ ಅನ್ನಿಸುತ್ತದೆ. ಇವರು ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ದರ್ಶನ ಮಾಡಿಸಿದ್ದು, ಇಂಥಹ ಕೆಲಸಗಳಿಗೆ ಸ್ಫೂರ್ತಿ ನೀಡಿತು.

**◆ ನಿಮ್ಮ ಮುಂದಿನ ಗುರಿ ಅಥವಾ ಕನಸುಗಳೇನು?**

ನಾನೀಗ ಎರಡು ಕೃತಿಗಳನ್ನು ಸಿದ್ಧಪಡಿಸುತ್ತಿದ್ದೇನೆ. ಮೊದಲನೆಯದು ವೈದ್ಯ ಗ್ರಂಥ. ಮೂರು ವೈದ್ಯ ಗ್ರಂಥದ ಹಸ್ತಪ್ರತಿಗಳನ್ನು ಕ್ರೋಡೀಕರಿಸಿ ಒಂದು ಸಂಪುಟವನ್ನು ಮಾಡುತ್ತಿದ್ದೇನೆ. ಇದು ನನ್ನ ಬಹುಕಾಲದ ಕನಸು. 'ವೈದ್ಯಚಿಂತಾಮಣಿ', 'ವೈದ್ಯಗ್ರಂಥ', 'ಸಾಳ್ವನ ವೈದ್ಯ ಸಾಂಗತ್ಯ' ಎನ್ನುವ ಮೂರು ಕೃತಿಗಳನ್ನು ಸಂಪಾದಿಸಿ ತರುತ್ತಿದ್ದೇನೆ. ಹಸ್ತಪ್ರತಿಗಳು ಬಹಳ ದೋಷಪೂರ್ಣವಾಗಿವೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ವೈದ್ಯ ಗ್ರಂಥಗಳು ಪ್ರಕಟವಾಗಬೇಕು, ಸಂಶೋಧನೆಗಳು ನಡೆಯಬೇಕು ಎಂಬ ಆಸೆಯಿಂದ ಮಾಡಿದ್ದು. ಕೆಲಸ ಬಹುತೇಕ ಮುಗಿದಿದೆ.

ಮತ್ತೊಂದು ಚಂದಸಾಗರವರ್ಣಿ ಎಂಬ ಕವಿ ಹದಿನೆಂಟನೆ ಶತಮಾನದಲ್ಲಿ ಬರೆದ ಕೆಲವು ಕೃತಿಗಳನ್ನು ಸಂಪಾದಿಸುತ್ತಿದ್ದೇನೆ. ಅವನೊಬ್ಬ ಜೈನ ಕವಿ. ಅವನ 11 ಪುಸ್ತಕಗಳು ಪ್ರಕಟವಾಗಿವೆ. ಇಲ್ಲಿ ನಾನು ಮೂರು ಅಪ್ರಕಟಿತ ಕಾವ್ಯಗಳನ್ನು ಸೇರಿಸಿ ಒಂದು ಸಂಪುಟದಲ್ಲಿ ಸಿದ್ಧಪಡಿಸುತ್ತಿದ್ದೇನೆ. ಇದಲ್ಲದೆ ಮೂರು ಗ್ರಂಥಗಳನ್ನು ಸಂಪಾದಿಸಿ ಕುವೆಂಪು ಅಧ್ಯಯನ ಸಂಸ್ಥೆಗೆ ಕೊಡಬೇಕಾಗಿದೆ.

**◆ ನಿಮ್ಮ ಬದುಕನ್ನು ಈಗ ಹಿಂತಿರುಗಿ ನೋಡಿದಾಗ ಸಾರ್ಥಕ ಅನ್ನಿಸುತ್ತದೆಯೇ?**

ನಮ್ಮ ತಾಯಿ ನನಗೆ, 'ನೀನು ನಿನ್ನ ಬದುಕನ್ನು ಸಾರ್ಥಕಪಡಿಸಿಕೊಂಡೆ' ಎಂದು ಹೇಳುತ್ತಿದ್ದರು. ನಾನು ಸಾರ್ಥಕ ಪದ ಬಳಸಲ್ಲ. ನನ್ನ ಬದುಕು ವ್ಯರ್ಥವಾಗಲಿಲ್ಲ ಎನ್ನಿಸುತ್ತಿದೆ.

**ಉಷಾ ನರಸಿಂಹನ್**

ಮೈಸೂರಿನವವರಾದ ಉಷಾ ಕವಿತೆ, ಕತೆ, ಕಾದಂಬರಿ, ನಾಟಕ, ಪ್ರಬಂಧ ಪ್ರಕಾರಗಳಲ್ಲಿ ಬರೆಯುತ್ತ ಬಂದಿದ್ದಾರೆ. 'ಕಾಮಿನೀತಲ್ಪ', 'ಕೃಷ್ಣಮೃಗ', 'ಪರ್ಷಿಯಾ ಪರಿಮಳ', 'ಬೀಬಿನಾಚ್ಯಾರ್' ಎಂಬ ಕಾದಂಬರಿಗಳನ್ನು, 'ಗಂಧವಾಹ', 'ಅಂಗರಾಗ', 'ಪಯಣಕ್ಕೆ ಮುನ್ನ' ಎಂಬ ಕವನ ಸಂಕಲನಗಳನ್ನು. 'ಮಾಮಿ ಮತ್ತು ಇತರ ಕಥೆಗಳು', 'ತಾವರೆದೇಟು', 'ಹರಿವ ನೀರು ಕೊರೆವ ಬಂಡೆ', 'ಸರಸ್ವತಿಯ ಸಾಕ್ಷಿ' ಎಂಬ ಕಥಾಸಂಕಲನಗಳನ್ನು, 'ಬೆಳಕು ಬೆಂಕಿಯಾಯಿತಯ್ಯೋ...', 'ಕದಳೀ ಕಲ್ಯಾಣ', 'ಕಂಚುಗನ್ನಡಿ' ಎಂಬ ನಾಟಕಗಳನ್ನು ಪ್ರಕಟಿಸಿದ್ದಾರೆ. ಸದಾ ಪ್ರಯೋಗಶೀಲರಾಗಿರುವ ಉಷಾ, ಬರವಣಿಗೆಯಲ್ಲಿ ತಮ್ಮದೇ ವಿಶಿಷ್ಟ ಛಾಪು ಮೂಡಿಸಿದ ಲೇಖಕಿ.